## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ನೇರ ನೇಮಕಾತಿಗೆ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ಕಮರ್ಷಿಯಲ್ ಪ್ರಾಕ್ಟೀಸ್‌ನ ಶೀಘ್ರಲಿಪಿ ಮತ್ತು ಬೆರಳಚ್ಚು ವಿಷಯಗಳ ತೇರ್ಗಡೆಯ ತತ್ಸಮಾನತೆ ಬಗ್ಗೆ.

**ಓದಲಾಗಿದೆ:**

೧) ಸರ್ಕಾರದ ಆದೇಶ ಸಂಖ್ಯೆ:ಶಿಇ ೨೬ ತಾಪಾಸೇ ೧೯೮೮, ದಿನಾಂಕ:೦೧-೦೩-೮೮
೨) ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಆಯ್ಕೆ ಪ್ರಾಧಿಕಾರ ಅವರ ಪತ್ರ ಸಂಖ್ಯೆ: ಶೀಬೇಪ್ರಾ ೦೧ ಇತರೆ ೦೪, ದಿನಾಂಕ:೦೩-೦೨-೨೦೦೬ರಂದು ಕೊನೆಗೊಂಡ ಪತ್ರ.
೩) ತಾಂತ್ರಿಕ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ: ಟಿಟಿಇ/೦೬/ಇಎಸ್‌ಟಿ (೨)(ಬಿ) ೨೦೦೪ /೬೦೯೬,ದಿನಾಂಕ:೨೨-೦೩-೨೦೦೬.

**ಪ್ರಸ್ತಾವನೆ:**

ಮೇಲೆ(೧) ರಲ್ಲಿ ಓದಲಾದ ಆದೇಶದಲ್ಲಿ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುತ್ತಿರುವ ಕಮರ್ಷಿಯಲ್ ಪ್ರಾಕ್ಟೀಸ್ ಡಿಪ್ಲೊಮೊ ಪರೀಕ್ಷೆ ಹೊಸ ಪಠ್ಯ ಕ್ರಮವನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುತ್ತಿರುವ ಕಿರಿಯ ಮತ್ತು ಪ್ರೌಢ ದರ್ಜೆ ಬೆರಳಚ್ಚು ಮತ್ತು ಶೀಘ್ರಲಿಪಿ ಪರೀಕ್ಷೆಗಳಿಗೆ ತತ್ಸಮಾನವೆಂದು ಈ ಕೆಳಕಂಡಂತೆ ಆದೇಶಿಸಿದೆ.

| ಕ್ರಮ ಸಂಖ್ಯೆ | ವಿದ್ಯಾರ್ಹತೆ | ಕಾಲಂ ೨ರಲ್ಲಿನ ವಿದ್ಯಾರ್ಹತೆ ಇದಕ್ಕೆ ಸಮ |
|---|---|---|
| ೦೧ | ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ಕಮರ್ಷಿಯಲ್ ಪ್ರಾಕ್ಟೀಸ್ (ಹೊಸ ಪಠ್ಯಕ್ರಮ) ನ ಎರಡನೇ ವರ್ಷದ ಡಿಪ್ಲೊಮೊದಲ್ಲಿ ಕನ್ನಡ ಬೆರಳಚ್ಚು ವಿಷಯದಲ್ಲಿ ಉತ್ತೀರ್ಣತೆ. | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಕಿರಿಯ ದರ್ಜೆಯ ಕನ್ನಡ ಬೆರಳಚ್ಚು ಪರೀಕ್ಷೆಯಲ್ಲಿ ಉತ್ತೀರ್ಣತೆಗೆ ಸಮ. |
| ೦೨ | ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ಕಮರ್ಷಿಯಲ್ ಪ್ರಾಕ್ಟೀಸ್ (ಹೊಸ ಪಠ್ಯಕ್ರಮ) ನ ಎರಡನೇ ವರ್ಷದ ಡಿಪ್ಲೊಮೊದಲ್ಲಿ ಕನ್ನಡ ಶೀಘ್ರಲಿಪಿ ವಿಷಯದಲ್ಲಿ ಉತ್ತೀರ್ಣತೆ. | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಕಿರಿಯ ದರ್ಜೆಯ ಕನ್ನಡ ಶೀಘ್ರಲಿಪಿ ಪರೀಕ್ಷೆಯಲ್ಲಿ ಉತ್ತೀರ್ಣತೆಗೆ ಸಮ. |
| ೦೩ | ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ಕಮರ್ಷಿಯಲ್ ಪ್ರಾಕ್ಟೀಸ್ (ಹೊಸ ಪಠ್ಯಕ್ರಮ) ನ ಮೂರನೇ ವರ್ಷದ ಡಿಪ್ಲೊಮೊದಲ್ಲಿ ಕನ್ನಡ ಬೆರಳಚ್ಚು ವಿಷಯದಲ್ಲಿ ಉತ್ತೀರ್ಣತೆ. | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಪ್ರೌಢ ದರ್ಜೆಯ ಕನ್ನಡ ಬೆರಳಚ್ಚು ಪರೀಕ್ಷೆಯಲ್ಲಿ ಉತ್ತೀರ್ಣತೆಗೆ ಸಮ. |
| ೦೪ | ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ಕಮರ್ಷಿಯಲ್ ಪ್ರಾಕ್ಟೀಸ್ (ಹೊಸ ಪಠ್ಯಕ್ರಮ) ನ ಮೂರನೇ ವರ್ಷದ ಡಿಪ್ಲೊಮೊದಲ್ಲಿ ಕನ್ನಡ ಶೀಘ್ರಲಿಪಿ ವಿಷಯದಲ್ಲಿ ಉತ್ತೀರ್ಣತೆ. | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಪ್ರೌಢ ದರ್ಜೆಯ ಕನ್ನಡ ಶೀಘ್ರಲಿಪಿ ಪರೀಕ್ಷೆಯಲ್ಲಿ ಉತ್ತೀರ್ಣತೆಗೆ ಸಮ. |

ಮೇಲೆ(೨) ರಲ್ಲಿ ಓದಲಾದ ಪತ್ರದಲ್ಲಿ ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಆಯ್ಕೆ ಪ್ರಾಧಿಕಾರವು ತಾಂತ್ರಿಕ ಪರೀಕ್ಷಾ ಮಂಡಳಿಯ ಕಮರ್ಷಿಯಲ್ ಪ್ರಾಕ್ಟೀಸ್ ಪಠ್ಯಕ್ರಮದ ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿ ವಿಷಯಗಳು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಬೆರಳಚ್ಚು ಮತ್ತು ಶೀಘ್ರಲಿಪಿ ವಿಷಯಗಳಿಗೆ ಸಮಾನತೆ ಕುರಿತು ಸ್ಪಷ್ಟೀಕರಣ ನೀಡುವಂತೆ ಕೋರಿಕೆ ಸಲ್ಲಿಸಿದ್ದಾರೆ.

ಮೇಲೆ(೩) ರಲ್ಲಿ ಓದಲಾದ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರು ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ಎಲ್ಲಾ ಪಾಲಿಟೆಕ್ನಿಕ್‌ಗಳಿಗೆ (ಸ್ವಾಯತ್ತ ಸಂಸ್ಥೆಗಳನ್ನು ಹೊರತುಪಡಿಸಿ) ಅನ್ವಯವಾಗುವಂತೆ ೨೦೦೩-೦೪ನೇ ಶೈಕ್ಷಣಿಕ ಸಾಲಿನಿಂದ ಜಾರಿಯಾಗಿರುವ ಸೆಮಿಸ್ಟರ್ ಪರೀಕ್ಷಾ ಹೊಸ ಪಠ್ಯಕ್ರಮದ ಅನ್ವಯ, ಕಮರ್ಷಿಯಲ್ ಪ್ರಾಕ್ಟೀಸ್ ಡಿಪ್ಲೊಮೊ ಪರೀಕ್ಷೆಗಳ ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿ ವಿಷಯಗಳ ಪರೀಕ್ಷೆಗಳ ಮಾರ್ಪಾಡು ಆಗಿದ್ದು ಇದನ್ನು ನೇಮಕಾತಿಗಳಿಗಾಗಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಕನ್ನಡ ಬೆರಳಚ್ಚು-ಶೀಘ್ರಲಿಪಿ ಪರೀಕ್ಷೆಗಳ ತತ್ಸಮಾನತೆಗೆ ಪರಿಗಣಿಸಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ.

ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಇಡಿ ೧೭೪ ಟಿಪಿಇ ೨೦೦೫**
**ಬೆಂಗಳೂರು, ದಿನಾಂಕ:೧೯ನೇ ನವೆಂಬರ್ ೨೦೦೬.**

ತಾಂತ್ರಿಕ ಶಿಕ್ಷಣ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ಸರ್ಕಾರವು ದಿನಾಂಕ:೦೨-೦೩-೧೯೮೮ ಸಂಖ್ಯೆ:ಇಡಿ ೨೬ ತಾಪಾಸೇ ೮೮ರ ಆದೇಶವನ್ನು ಮುಂದುವರೆಸುತ್ತಾ, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುತ್ತಿರುವ ಕಮರ್ಷಿಯಲ್ ಪ್ರಾಕ್ಟೀಸ್ ಡಿಪ್ಲೊಮೊ ಪರೀಕ್ಷೆಗಳ ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿ ವಿಷಯಗಳ ಪರೀಕ್ಷೆಗಳ ಮಾರ್ಪಾಡನ್ನು ಈ ಕೆಳಕಂಡಂತೆ ಮಾಡಲಾಗಿದ್ದು ಇದನ್ನು ನೇಮಕಾತಿಗಳಿಗಾಗಿ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿ ಪರೀಕ್ಷೆಗಳ ತತ್ಸಮಾನತೆಗೆ ಪರಿಗಣಿಸಬೇಕಾಗುತ್ತದೆ ಎಂದು ಈ ಕೆಳಕಂಡಂತೆ ಆದೇಶಿಸಲಾಗಿದೆ.

| ಕ್ರಮ ಸಂಖ್ಯೆ | ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಪರೀಕ್ಷೆಗಳ ತೇರ್ಗಡೆ | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಪರೀಕ್ಷೆಗಳಿಗೆ ಅನ್ವಯವಾಗುವಂತೆ ತತ್ಸಮಾನತೆ |
|---|---|---|
| ೦೧ | ಕಮರ್ಷಿಯಲ್ ಪ್ರಾಕ್ಟೀಸ್‌ನ ೨ನೇ ಸೆಮಿಸ್ಟರ್ ಕನ್ನಡ ಬೆರಳಚ್ಚು ತೇರ್ಗಡೆ. | ವಾಣಿಜ್ಯ ಪರೀಕ್ಷೆಗಳ ಪ್ರಥಮ ದರ್ಜೆ ಕನ್ನಡ ಬೆರಳಚ್ಚು (ಜೂನಿಯರ್ ಗ್ರೇಡ್) |
| ೦೨ | ಸಿ.ಪಿ ೩ನೇ ಮತ್ತು ೪ನೇ ಸೆಮಿಸ್ಟರ್ ಕನ್ನಡ ಶೀಘ್ರಲಿಪಿ ತೇರ್ಗಡೆ. | ವಾಣಿಜ್ಯ ಪರೀಕ್ಷೆಗಳ ಶೀಘ್ರಲಿಪಿ ಪ್ರಥಮ ದರ್ಜೆ ಕನ್ನಡ (ಜೂನಿಯರ್ ಗ್ರೇಡ್) |
| ೦೩ | ಸಿ.ಪಿ ೪ನೇ ಸೆಮಿಸ್ಟರ್ ಬೆರಳಚ್ಚು ತೇರ್ಗಡೆ | ವಾಣಿಜ್ಯ ಪರೀಕ್ಷೆಗಳ ಬೆರಳಚ್ಚು ಪ್ರೌಢ ದರ್ಜೆ (ಸೀನಿಯರ್ ಗ್ರೇಡ್) |
| ೦೪ | ಸಿ.ಪಿ ೫ನೇ ಮತ್ತು ೬ನೇ ಸೆಮಿಸ್ಟರ್ ಶೀಘ್ರಲಿಪಿ ತೇರ್ಗಡೆ. | ವಾಣಿಜ್ಯ ಪರೀಕ್ಷೆಗಳ ಶೀಘ್ರಲಿಪಿ ಪ್ರೌಢ ದರ್ಜೆ (ಸೀನಿಯರ್ ಗ್ರೇಡ್) |

೧೯೯೯-೨೦೦೦ನೇ ಸಾಲಿನಿಂದ ಶೈಕ್ಷಣಿಕವಾಗಿ ಸ್ವಾಯತ್ತತೆ ಪಡೆದ ಈ ಕೆಳಕಂಡ (ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಸರ್ಕಾರಿ : ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಸಿ.ಪಿ ಡಿಪ್ಲೊಮೊದ ಕನ್ನಡ ಬೆರಳಚ್ಚು ಹಾಗೂ ಶೀಘ್ರಲಿಪಿ ವಿಷಯಗಳಿಗೆ ಸಂಬಂಧಿಸಿದಂತೆ ನಡೆಸಲಾದ ಪರೀಕ್ಷೆಗಳು ಹಾಗೂ ಕನ್ನಡ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಸದರಿ ವಿಷಯಗಳ ತತ್ಸಮಾನತೆ ವಿವರ ಈ ಕೆಳಕಂಡಂತಿದೆ.

(ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು ೧೯೯೯-೨೦೦೦ ದಿಂದ ಸ್ವಾಯತ್ತತ್ತೆ ಪಡೆದಿದೆ)

| ಕ್ರಮ ಸಂಖ್ಯೆ | ಕಮರ್ಷಿಯಲ್ ಪ್ರಾಕ್ಟೀಸ್ ಡಿಪ್ಲೊಮೊ | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಪರೀಕ್ಷೆಗಳಿಗೆ ತತ್ಸಮಾನತೆ |
|---|---|---|
| ೦೧ | ಬೆರಳಚ್ಚು - ೩ನೇ ಮತ್ತು ೪ನೇ ಸೆಮಿಸ್ಟರ್ ತೇರ್ಗಡೆ | ವಾಣಿಜ್ಯ ಪರೀಕ್ಷೆಗಳ ಬೆರಳಚ್ಚು ಪ್ರಥಮ ದರ್ಜೆಗೆ (ಜೂನಿಯರ್ ಗ್ರೇಡ್) ತತ್ಸಮಾನ |
| ೦೨ | ಶೀಘ್ರಲಿಪಿ - ೩ನೇ ಮತ್ತು ೪ನೇ ಸೆಮಿಸ್ಟರ್ ತೇರ್ಗಡೆ | ವಾಣಿಜ್ಯ ಪರೀಕ್ಷೆಗಳ ಶೀಘ್ರಲಿಪಿ ಪ್ರಥಮ ದರ್ಜೆಗೆ (ಜೂನಿಯರ್ ಗ್ರೇಡ್) ತತ್ಸಮಾನ |
| ೦೩ | ಬೆರಳಚ್ಚು - ೫ನೇ ಮತ್ತು ೬ನೇ ಸೆಮಿಸ್ಟರ್ ತೇರ್ಗಡೆ | ವಾಣಿಜ್ಯ ಪರೀಕ್ಷೆಗಳ ಬೆರಳಚ್ಚು ಪ್ರೌಢ ದರ್ಜೆಗೆ (ಸೀನಿಯರ್ ಗ್ರೇಡ್) ತತ್ಸಮಾನ |
| ೦೪ | ಶೀಘ್ರಲಿಪಿ - ೫ನೇ ಮತ್ತು ೬ನೇ ಸೆಮಿಸ್ಟರ್ ತೇರ್ಗಡೆ | ವಾಣಿಜ್ಯ ಪರೀಕ್ಷೆಗಳ ಶೀಘ್ರಲಿಪಿ ಪ್ರೌಢ ದರ್ಜೆಗೆ (ಸೀನಿಯರ್ ಗ್ರೇಡ್) ತತ್ಸಮಾನ |

**ಸೂಚನೆ:**-೧೯೯೯-೨೦೦೦ದಿಂದ ಇಲ್ಲಿಯವರೆಗೆ ಸದರಿ ವಿಷಯಗಳ ಪಠ್ಯಕ್ರಮದಲ್ಲಿ ಬದಲಾವಣೆ ಇರುವುದಿಲ್ಲ.

ಸಿ.ಪಿ.ಸಿ ಸರ್ಕಾರಿ ಪಾಲಿಟೆಕ್ನಿಕ್, ಮೈಸೂರು (೧೯೯೯-೨೦೦೦ದ ವರೆಗೆ)

| ಕ್ರಮ ಸಂಖ್ಯೆ | ಕಮರ್ಷಿಯಲ್ ಪ್ರಾಕ್ಟೀಸ್ ಡಿಪ್ಲೊಮೊ | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಪರೀಕ್ಷೆಗಳಿಗೆ ತತ್ಸಮಾನತೆ |
|---|---|---|
| ೦೧ | ೪ನೇ ಸೆಮಿಸ್ಟರ್ ಬೆರಳಚ್ಚು ತೇರ್ಗಡೆ | ಬೆರಳಚ್ಚು ಪ್ರಥಮ ದರ್ಜೆಗೆ ತತ್ಸಮಾನ |
| ೦೨ | ೪ನೇ ಸೆಮಿಸ್ಟರ್ ಶೀಘ್ರಲಿಪಿ ತೇರ್ಗಡೆ | ಶೀಘ್ರಲಿಪಿ ಪ್ರಥಮ ದರ್ಜೆಗೆ ತತ್ಸಮಾನ |
| ೦೩ | ೫ನೇ ಸೆಮಿಸ್ಟರ್ ಬೆರಳಚ್ಚು ತೇರ್ಗಡೆ | ವಾಣಿಜ್ಯ ಪರೀಕ್ಷೆಗಳ ಬೆರಳಚ್ಚು ಪ್ರೌಢ ದರ್ಜೆಗೆ ತತ್ಸಮಾನ |
| ೦೪ | ೬ನೇ ಸೆಮಿಸ್ಟರ್ ಶೀಘ್ರಲಿಪಿ ತೇರ್ಗಡೆ | ವಾಣಿಜ್ಯ ಪರೀಕ್ಷೆಗಳ ಶೀಘ್ರಲಿಪಿ ಪ್ರೌಢ ದರ್ಜೆಗೆ ತತ್ಸಮಾನ |

**ಸೂಚನೆ:-** ಈ ಸಂಸ್ಥೆಯ ೨೦೦೩-೦೪ನೇ ಶೈಕ್ಷಣಿಕ ಸಾಲಿನಿಂದ ಕಂಡಿಕೆ (೧)ರ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ಪಠ್ಯಕ್ರಮದ ಅನುಸಾರ ಪರೀಕ್ಷೆಗಳನ್ನು ನಡೆಸುತ್ತಿದ್ದು ಸದರಿ ಕಂಡಿಕೆಯನ್ನು ಕಂಡಿಕೆ (೧) ಪರಿಗಣಿಸಿರುವುದು.

ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ

| ಕ್ರಮ ಸಂಖ್ಯೆ | ಕಮರ್ಷಿಯಲ್ ಪ್ರಾಕ್ಟೀಸ್ ಡಿಪ್ಲೊಮೊ | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಪರೀಕ್ಷೆಗಳಿಗೆ ತತ್ಸಮಾನತೆ |
|---|---|---|
| ೦೧ | ೩ನೇ ಮತ್ತು ೪ನೇ ಸೆಮಿಸ್ಟರ್ ಬೆರಳಚ್ಚು ಮತ್ತು ಶೀಘ್ರಲಿಪಿ ತೇರ್ಗಡೆ | ವಾಣಿಜ್ಯ ಪರೀಕ್ಷೆಗಳ ಬೆರಳಚ್ಚು ಮತ್ತು ಶೀಘ್ರಲಿಪಿ ಪ್ರಥಮ ದರ್ಜೆಗೆ ತತ್ಸಮಾನ |
| ೦೨ | ೫ನೇ ಮತ್ತು ೬ನೇ ಸೆಮಿಸ್ಟರ್ ಬೆರಳಚ್ಚು ಮತ್ತು ಶೀಘ್ರಲಿಪಿ ತೇರ್ಗಡೆ | ವಾಣಿಜ್ಯ ಪರೀಕ್ಷೆಗಳ ಬೆರಳಚ್ಚು ಮತ್ತು ಶೀಘ್ರಲಿಪಿ ಪ್ರೌಢ ದರ್ಜೆಗೆ ತತ್ಸಮಾನ |

ಸೂಚನೆ:೧೯೯೯-೨೦೦೦ನೇ ಶೈಕ್ಷಣಿಕ ಸ್ವಾಯತ್ತತೆ ಪಡೆದ ಈ ಸಂಸ್ಥೆಯು ಸದರಿ ವಿಷಯಗಳು ಪಠ್ಯಕ್ರಮದಲ್ಲಿ ಇಲ್ಲಿಯವರೆವಿಗೂ ಯಾವುದೇ ಬದಲಾವಣೆ ಇರುವುದಿಲ್ಲ.

ಬಿ.ವಿ.ವಿ.ಎಸ್ ಪಾಲಿಟೆಕ್ನಿಕ್, ಬಾಗಲಕೋಟೆ (೧೯೯೯-೨೦೦೦ ದಿಂದ ೨೦೦೨ರ ವರೆಗೆ)

| | | |
|---|---|---|
| ೦೧ | ೫ನೇ ಮತ್ತು ೬ನೇ ಸೆಮಿಸ್ಟರ್ ಬೆರಳಚ್ಚು ಮತ್ತು ಶೀಘ್ರಲಿಪಿ ತೇರ್ಗಡೆ | ವಾಣಿಜ್ಯ ಪರೀಕ್ಷೆಗಳ ಬೆರಳಚ್ಚು ಮತ್ತು ಶೀಘ್ರಲಿಪಿ ಪ್ರೌಢ ದರ್ಜೆಗೆ ತತ್ಸಮಾನ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಪಿ.ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ.
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಈ ಆದೇಶವನ್ನು ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು ಕಳುಹಿಸಿಕೊಟ್ಟಿದೆ. ಪ್ರಕಟಿಸಿದ ಆದೇಶದ ೨೦೦ ಪ್ರತಿಗಳನ್ನು ಈ ಇಲಾಖೆಗೆ ಒದಗಿಸಬೇಕೆಂದು ಕೋರಲಾಗಿದೆ.

**ಪ್ರತಿ:**

೧) ನಿರ್ದೇಶಕರು, ತಾಂತ್ರಿಕ ಶಕ್ಷಣ ಇಲಾಖೆ, ಬೆಂಗಳೂರು
೨) ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಪಾರ್ಕ್‌ಹೌಸ್, ಬೆಂಗಳೂರು-೧
೩) ಕಾರ್ಯದರ್ಶಿ, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು
೪) ಆಡಳಿತಾಧಿಕಾರಿ, ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಆಯ್ಕೆ ಪ್ರಾಧಿಕಾರ, ವಿಶ್ವೇಶ್ವರಯ್ಯ ಕೇಂದ್ರ ಮುಖ್ಯ ಗೋಪುರ, ೨೦ನೇ ಮಹಡಿ, ಡಾ:ಅಂಬೇಡ್ಕರ್ ವೀಧಿ, ಬೆಂಗಳೂರು-೧
೫) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾ ನಿಯಮಗಳು), ವಿಧಾನ ಸೌಧ
೬) ಕಾರ್ಯದರ್ಶಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-೩
೭) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೆ.ಆರ್.ವೃತ್ತ, ಬೆಂಗಳೂರು
**೮)** ಶಾಖಾ ರಕ್ಷಾ ಕಡತ/ ಹೆಚ್ಚಿನ ಪ್ರತಿ.

೨೦೭೭ವಿರಾಜ್